C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.132/2021

ದಿನಾಂಕಃ 22.11.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:11 ಪಿ. ಡಬ್ಲ್ಯೂ:10

| | |
|---|---|
| ಸಾಕ್ಷಿದಾರರ ಹೆಸರು | ಚನ್ನೇಗೌಡ |
| ತಂದೆಯ ಹೆಸರು | ಚಂದ್ರಶೇಖರ |
| ವಯಸ್ಸು | 36 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಬೇಲೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ತೋರಿಸಿದ ನಿಪಿ.19 ಮಹಜರ್ ನಲ್ಲಿ ನನ್ನ ರುಜು ಇರುತ್ತದೆ. ಅದನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಂಡ್ಯ ಗಾಮಾಂತರ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಸದರಿ ರುಜುವನ್ನು ಮಾಡಿ ಒಂದುವರೆ ವರ್ಷದ ಮೇಲೆ ಆಗಿದೆ. ನಾನು ಪೊಲೀಸ್ ಠಾಣೆಗೆ ಬೇರೆ ಕೆಲಸದ ಮೇಲೆ ಹೋಗಿದ್ದೆನು, ಆಗ ಪಿಎಸ್ಐ ರವರು ಲ್ಯಾಪ್ ಟಾಪ್ ಮತ್ತು ಮೊಬೈಲ್ ಅನ್ನು ವಶಪಡಿಸಿಕೊಳ್ಳುತ್ತೇವೆ, ನೀವು ಸಾಕ್ಷಿಯಾಗಿ ಸಹಿ ಮಾಡಬೇಕೆಂದು ಹೇಳಿದರು . ಆ ಸಮಯದಲ್ಲಿ ಯಾರೂ ಒಬ್ಬ ಆರೋಪಿ ಇದ್ದ, ಆತನ ಹೆಸರು ಗೊತ್ತಿಲ್ಲ. ನನಗೆ ತೋರಿಸಿದ ನಿಪಿ.20 ರಿಂದ ನಿಪಿ.22 ರಲ್ಲಿ ನಾನು ಮತ್ತು ನನ್ನ ಸ್ನೇಹಿತನಾದ ಚಾಸಾ.12 ಜಗದೀಶ ಇದ್ದೇವೆ. ಸದರಿ ಫೋಟೋದಲ್ಲಿ ಬೇರೆ ಯಾರು ಇದ್ದಾರೆ ಅಂತ ನನಗೆ ಗೊತ್ತಿಲ್ಲ. ನಿಪಿ.23 ಫೋಟೊದಲ್ಲಿ ಸಿಮ್ ಕಾಣಿಸುತ್ತಿದೆ . ಅದನ್ನು ಠಾಣೆಯಲ್ಲಿ ನೋಡಿರುವುದು ನೆನಪಿಲ್ಲ. ಸದರಿ ಮೊಬೈಲ್ ಮತ್ತು ಸಿಮ್ ಯಾವುದೋ ಮರ್ಡರ್ ಕೇಸ್ ನಲ್ಲಿ ಆರೋಪಿಗೆ ಸೇರಿದ್ದು, ಅದನ್ನು ವಶಪಡಿಸಿಕೊಳ್ಳುತ್ತಿರುವುದಾಗಿ ಸಬ್ ಇನ್ಸ್ಪೆಕ್ಟರ್ ನನಗೆ ಹೇಳಿದರು. ಸದರಿ ಮೊಬೈಲ್ ಮತ್ತು ಸಿಮ್ ಕಾರ್ಡನ್ನು ಠಾಣೆಗೆ ಯಾರು ತಂದುಕೊಟ್ಟರು ಅಂತ ನನಗೆ ಗೊತಿತಲ್ಲ .ನಾನು ಠಾಣೆಗೆ

ಹೋಗುವಷ್ಟರಲ್ಲಿ , ಇವುಗಳು ಠಾಣೆಯಲ್ಲಿ ಇದ್ದವು. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಮೊಬೈಲ್ ಮತ್ತು ಕಾರ್ಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾನಯಾಲಯದ ಮುಂದೆ ಇರುವ ಒಂದು ಕಾರ್ಡನ್ನು ನೋಡಿ ಠಾಣೆಯಲ್ಲಿ ನೋಡಿದ ಕಾರ್ಡು ಇದೇ ತರಹ ಇತ್ತು ಎಂದು ಹೇಳುತ್ತಾರೆ. ಕಾರ್ಡ್ ಇದ್ದ ಒಂದು brown color ಕವರ್ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ. ನನಗೆ ತೋರಿಸಿದ ಪೊಲೀಸ್ ನೋಟೀಸನಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಸದರಿ ನೋಟೀಸನ್ನು ನಿಪಿ.60 ಎಂದು ಹಾಗೂ ಸಾಕ್ಷಿಯ ರುಜುವನ್ನು ನಿಪಿ.60(ಎ) ಎಂದು ಗುರುತಿಸಲಾಯಿತು. ರುಜುವನ್ನು ಅದೇ ದಿವಸ ಠಾಣೆಯಲಿ ಮಾಡಿದ್ದೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ.

(ಈ ಹಂತದಲ್ಲಿ , RFSL ನಿಂದ ಮೊಬೈಲ್ ವಾಪಾಸ್ಸು ಬಂದಿರುವುದಿಲ್ಲ ಎಂದು ಪಿ.ಪಿ. ರವರು ನ್ಯಾಯಾಲಯಕ್ಕೆ ತಿಳಿಸಿ , ವಿಚಾರಣೆಯನ್ನು ಮುಂದೂಡುವಂತೆ ಕೋರಿರುತ್ತಾರೆ, ಆದ್ದರಿಂದ ವಿಚಾರಣೆಯನ್ನು ಮುಂದೂಡಲಾಯಿತು .)

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.